ಶ್ರೀ ಎಂ. ಎಸ್. ಕೃಷ್ಣನ್.— ಮಾನ್ಯ ಬೊಮ್ಮಾಯಿಯವರು ಒಂದು ಮಾತು ಹೇಳಿದರು, ಅವರು ಹೇಳಿದ್ದು ಏನೆಂದರೆ ಮೊದಲು ಒಂದು ರಿಪೋರ್ಟ್ ಬಂದಿದೆ ಎಂದು ಹೇಳಿದ್ದಾರೆ. ಆ ರಿಪೋರ್ಟ್‌ನಲ್ಲಿ ತಪ್ಪು ತಸ್ಥರು ಇದ್ದಾರೆಂದು ಒಪ್ಪಿಕೊಳ್ಳುತ್ತಾರೆ.

ಅಧ್ಯಕ್ಷರು.— ತಾವು ಸೀನಿಯರ್ ಮೋಸ್ಟ್ ಮೆಂಬರ್ ಇದ್ದೀರಿ. ನಿಮ್ಮನ್ನು ಶಾಲೆಗೆ ಕಳುಹಿಸ ಬೇಕಾಗುತ್ತದೆ. ರೆಕಾರ್ಡ್ ಮಾಡಬೇಡಿಯೆಂದು ಹೇಳಬೇಕಾಗುತ್ತದೆ. ಆ ವಿಷಯ ಕ್ಲೋಸ್ ಮಾಡಿ ಆಗಿದೆ. ನಾನು ರೂಲಿಂಗ್ ಕೊಟ್ಟಿದ್ದೇನೆ.

ಶ್ರೀ ಎಂ. ಎಸ್. ಕೃಷ್ಣನ್.— ನೀವು ನಮ್ಮ ಸಹಾಯಕ್ಕೆ ಬರದಿದ್ದರೆ ಹೇಗೆ ?

ಅಧ್ಯಕ್ಷರು.— ತಾವು ಕೂಡಿ. ಈಗ ಮಾನ್ಯ ಕುಶಾಲರವರೇ ಮಂತ್ರಿಗಳ ಗಮನ ಸೆಳೆಯಿರಿ.

(i) ಸುಳ್ಯದಲ್ಲಿರತಕ್ಕ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿರತಕ್ಕ ನ್ಯೂನ್ಯತೆಗಳ ಬಗ್ಗೆ.

ಶ್ರೀ ಕೆ. ಕುಶಾಲ.— ಮಾನ್ಯ ಅಧ್ಯಕ್ಷರೇ, ಸುಳ್ಯದಲ್ಲಿರತಕ್ಕ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿರ ತಕ್ಕ ನ್ಯೂನ್ಯತೆಗಳ ಬಗ್ಗೆ ಮಾನ್ಯ ಮಂತ್ರಿಗಳವರ ಗಮನಕ್ಕೆ ಸೆಳೆಯಲು ಬಯಸುತ್ತೇನೆ.

ಶ್ರೀ ಹೆಚ್. ಟಿ. ಕೃಷ್ಣಪ್ಪ (ಆರೋಗ್ಯ ಸಚಿವರು).— ನಾನು ಈ ಕೆಳಗಿನ ಹೇಳಿಕೆಯನ್ನು ಮಾಡ ಬಯಸುತ್ತೇನೆ.

ಪ್ರಾಥಮಿಕ ಆರೋಗ್ಯ ಕೇಂದ್ರ ಸುಳ್ಯ.

ಈ ಆರೋಗ್ಯ ಕೇಂದ್ರದ ನೂತನ ಕಟ್ಟಡವು ಮೇಲ್ಛಾವಣಿಯ ಮಟ್ಟಕ್ಕೆ ಬಂದಿದೆ ಕ್ಷ-ಕಿರಣ ಕೊಠಡಿಗೆ ದುರಸ್ತಿಯ ಅವಶ್ಯಕತೆಯಿದ್ದೂ ಅದಕ್ಕಾಗಿ ಲೋಕೋಪಯೋಗಿ ಇಲಾಖೆಯವರಲ್ಲಿ ವಿನಂತಿ ಮಾಡಲಾಗಿದೆ. ಈ ಕೆಳಕಂಡ ಸಿಬ್ಬಂದಿ ಸ್ಥಾನಗಳು ಖಾಲಿ ಇವೆ.

ಅ)	ವೈದ್ಯಾಧಿಕಾರಿಗಳು	೨
ಆ)	ಆರೋಗ್ಯ ಕಾರ್ಯಕರ್ತರು (ಪು)	೩
ಇ)	ಆರೋಗ್ಯ ಕಾರ್ಯಕರ್ತರು (ಮಂ)	೨
ಈ)	ಸೂಕ್ಷ್ಮದರ್ಶಿ	೧
ಉ)	ಕ್ಷೇತ್ರ ಅ. ಶಿ. ಅಧಿಕಾರಿ	೧
ಊ)	ನಾಲ್ಕನೇ ದರ್ಜೆ ನೌಕರರು	೩

ಪ್ರಾಥಮಿಕ ಆರೋಗ್ಯ ಕೇಂದ್ರ ಕೊಲ್ಲಮೊಗ್ರು.

ಈ ಪ್ರಾಥಮಿಕ ಆರೋಗ್ಯ ಕೇಂದ್ರದ ಕಟ್ಟಡ ನಿರ್ಮಾಣಕ್ಕಾಗಿ ಅಂದಾಜು ಪಟ್ಟಿ ಮೊತ್ತ ರೂ. ೧೧ ೫೦ ಲಕ್ಷಗಳಿಗೆ ಮತ್ತು ನಕ್ಷೆಗಳಿಗೆ ಸರ್ಕಾರದ ಆಡಳಿತ ಮಂಜೂರಾತಿಯು ಸರ್ಕಾರಿ ಆದೇಶದ ಸಂಖ್ಯೆ ಆಕಾಂ ೮೦ ಸಿಜಿಎಸ್ ೮೬ ದಿನಾಂಕ ೨೦-೮-೮೬ರಲ್ಲಿ ಕೊಡಲಾಗಿದೆ. ಈ ಕೆಳಕಂಡ ಸಿಬ್ಬಂದಿ ಸ್ಥಾನಗಳು ಖಾಲಿ ಇವೆ.

ಅ)	ವೈದ್ಯಾಧಿಕಾರಿ	೧
ಆ)	ಮಹಿಳಾ ಆರೋಗ್ಯ ಕಾರ್ಯಕರ್ತೆ	೧
ಇ)	ಪ್ರಥಮ ದರ್ಜೆ ಗುಮಾಸ್ತ	೧
ಈ)	ಸೂಕ್ಷ್ಮದರ್ಶಿ	೧
ಉ)	ನಾಲ್ಕನೆ ದರ್ಜೆ ನೌಕರ	೧

ಸಂಚಾರಿ ಆರೋಗ್ಯ ಘಟಕ, ಸುಳ್ಯ.

ಆರೋಗ್ಯ ಕಾರ್ಯಕರ್ತ ಸ್ಥಾನ—೧ ಖಾಲಿ ಇದೆ.

ಪ್ರಾಥಮಿಕ ಆರೋಗ್ಯ ಘಟಕ, ಬೆಳ್ಳಾರೆ.

ಈ ಪ್ರಾಥಮಿಕ ಆರೋಗ್ಯ ಘಟಕವು ಸರ್ಕಾರಿ ಕಟ್ಟಡದಲ್ಲಿ ಕೆಲಸ ನಿರ್ವಹಿಸುತ್ತಿದೆ. ದುರಸ್ತಿ ಕೈಗೊಳ್ಳಲು ದಿನಾಂಕ ೧೧-೪-೬೬ರಲ್ಲಿ ಲೋಕೋಪಯೋಗಿ ಇಲಾಖೆಯವರನ್ನು ಮನವಿ ಮಾಡಲಾಗಿದೆ ಅವರು ಕೆಲಸವನ್ನು ಶೀಘ್ರದಲ್ಲಿ ಕೈಗೊಳ್ಳುವ ನಿರೀಕ್ಷೆ ಇದೆ. ೨ ನಾಲ್ಕನೆ ದರ್ಜೆ ನೌಕರರ ಸ್ಥಾನಗಳು ಖಾಲಿ ಇವೆ.

ಪ್ರಾಥಮಿಕ ಆರೋಗ್ಯ ಘಟಕ, ಸುಬ್ರಹ್ಮಣ್ಯ.

ಖಾಸಗೀ ಕಟ್ಟಡದಲ್ಲಿ ಕೆಲಸ ನಿರ್ವಹಿಸುತ್ತಿದೆ.

ವೈದ್ಯಾಧಿಕಾರಿ ಸ್ಥಾನ	೧)	ಖಾಲಿ ಇದೆ.
ಫಾರ್ಮಸಿಸ್ಟ್ ಸ್ಥಾನ	೧)	

ಪ್ರಾಥಮಿಕ ಆರೋಗ್ಯ ಘಟಕ, ಗುತ್ತಿಗಾರು.

ಈ ಪ್ರಾಥಮಿಕ ಆರೋಗ್ಯ ಘಟಕವು ಸರ್ಕಾರಿ ಕಟ್ಟಡದಲ್ಲಿ ಕೆಲಸ ನಿರ್ವಹಿಸುತ್ತಿದೆ.

ಫಾರ್ಮಸಿಸ್ಟ್ ಹುದ್ದೆ	೧)	ಖಾಲಿ ಇದೆ.
ಆರೋಗ್ಯ ಕಾರ್ಯಕರ್ತ (ಪು)	೧)	

ಪ್ರಾಥಮಿಕ ಆರೋಗ್ಯ ಘಟಕ, ಪಂಜ.

ಈ ಪ್ರಾಥಮಿಕ ಆರೋಗ್ಯ ಘಟಕವು ಸರ್ಕಾರಿ ಕಟ್ಟಡದಲ್ಲಿ ಕಾರ್ಯ ನಿರ್ವಹಿಸುತ್ತಿದೆ.

ವೈದ್ಯಾಧಿಕಾರಿ ಹುದ್ದೆ	೧)	
ಫಾರ್ಮಸಿಸ್ಟ್ ಹುದ್ದೆ	೧)	ಖಾಲಿ ಇದೆ.
ಆರೋಗ್ಯ ಕಾರ್ಯಕರ್ತ (ಪು)	೧)	

ಈ ಖಾಲಿ ಹುದ್ದೆಗಳನ್ನು ತುಂಬಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ. ಈ ಕೆಳಕಂಡ ಆರೋಗ್ಯ ಕೇಂದ್ರಗಳಿಗೆ ಹಿಂದಿನ ೩ ವರ್ಷಗಳಲ್ಲಿ ಸರಬರಾಜು ಮಾಡಿರುವ ಔಷಧಿಗಳ ವಿವರ ಈ ಕೆಳಕಂಡಂತೆ ಇದೆ

ಕ್ರಮ ಸಂಖ್ಯೆ	ಆರೋಗ್ಯ ಕೇಂದ್ರದ ಹೆಸರು	೧೯೬೪-೬೫ ರೂ.ಗಳಲ್ಲಿ	೧೯೬೫-೬೬ ರೂ.ಗಳಲ್ಲಿ
೧)	ಪ್ರಾಥಮಿಕ ಆರೋಗ್ಯ ಕೇಂದ್ರ, ಸುಳ್ಯ	೧೩,೮೬೭-೦೫	೪೧,೮೩೦-೯೭
೨)	—ಡಿಟೋ— ಕೊಲ್ಲಮೊಗ್ರು	೭,೬೭೦-೯೮	೧೦,೫೬೩-೧೧
೩)	ಸಂಚಾರಿ ಆರೋಗ್ಯ ಘಟಕ, ಸುಳ್ಯ	೩,೫೧೬-೦೦	೫,೮೨೭-೭೫
೪)	ಪ್ರಾಥಮಿಕ ಆರೋಗ್ಯ ಘಟಕಗಳು (ಪ್ಯಾಕೇಜ್ ಔಷಧಿಗಳು)		
	೧) ಪಂಜ	೭,೧೫೫ ೯೮	೧೦,೩೪೯-೩೭
	೨) ಗುಟ್ಟಿಗಾರ್	೭,೧೭೪-೫೫	೧೦,೪೦೩-೪೭
	೩) ಬೆಳ್ಳಾರೆ	೭,೧೭೪-೫೫	೧೦,೪೦೩-೪೬
	೪) ಸುಬ್ರಮಣ್ಯ	೭,೧೭೪-೫೫	೧೦,೪೦೩-೪೭
	೫) ಪ್ರಾಥಮಿಕ ಆರೋಗ್ಯ ಕೇಂದ್ರ ಸೂಳ್ಯ (ಉಪ ಕೇಂದ್ರ)	೧೨,೮೦೩-೫೯	೧೭,೧೩೮-೨೩

೧೯೮೬-೮೭ಕ್ಕೆ ಇಂಡೆಂಟ್ ಪ್ರಕಾರ ಔಷಧಿಗಳನ್ನು ಸರಬರಾಜು ಮಾಡಲುಕ್ರಮ ಕೈಗೊಳ್ಳಲಾಗುತ್ತಿದೆ. ಶೆಡ್ಯೂಲ್ ಪ್ರಕಾರ ದಕ್ಷಿಣ ಕನ್ನಡ ಜಿಲ್ಲೆಗೆ ಡಿಸೆಂಬರ್ ೧೯೮೬ಕ್ಕೆ ಸರಬರಾಜು ಮಾಡಲಂ ನಿಗದಿ ಪಡಿಸಿದೆ. ಆದಾಗ್ಯೂ ಈಗಾಗಲೇ ಸರಬರಾಜು ಮಾಡಲಂ ಕ್ರಮ ಕೈಗೊಳ್ಳಲಾಗಂತ್ತಿದೆ.

ಮೇಲೆ ಸೂಚಿಸಿರುವಂತೆ ನೋಡಿದರೆ ಸೂಳ್ಯ ತಾಲ್ಲೂಕಿನಲ್ಲಿರಂವ ಆರೋಗ್ಯ ಕೇಂದ್ರಗಳಿಗೆ ೧೯೮೫-೮೬ನೇ ಸಾಲಿನಲ್ಲಿ ಹಿಂದಿನ ಸಾಲಿಗಿಂತ ಹೆಚ್ಚಿನ ಪ್ರಮಾಣದ ಔಷಧಿಗಳನ್ನು ಸರಬರಾಜು ಮಾಡಲಾಗಿದೆ.

ಶ್ರೀ ಕೆ. ಕಂಠಾಲ.—೧೯೮೫ನೇ ಇಸವಿಯಿಂದಲ್ಲೂ ವೈದ್ಯಾಧಿಕಾರಿಯು ಹುದ್ದೆ ಇದೆ. ಆಲ್ಲಿ ಕಾಂಪೌಂಡರ್ ಹುದ್ದೆ ಕೂಡ ಇಲ್ಲ. ಕಳೆದ ಸಾರಿ ಇಲಾಖೆಯು ನೇಮಕ ಮಾತಿಕೊಂಡ ವೈದ್ಯಾಧಿಕಾರಿಗಳಲ್ಲಿ ಭರ್ತಿಯಾಗದಿರುವ ಸ್ಥಳಗಳಿಗೆ ಅದ್ಯತೆಯ ಆಧಾರದ ಮೇಲೆ ವೈದ್ಯಾಧಿಕಾರಿಗಳ ಹುದ್ದೆಯನ್ನು ಭರ್ತಿ ಮಾಡುವಂತಹ ಕೆಲಸವನ್ನು ಮಾಡಿಲ್ಲ. ಅದೇ ರೀತಿ ಶುಭ್ರಮ್ಮಣ್ಯ ಪ್ರಾಥಮಿಂಕ ಆರೋಗ್ಯ ಘಟಕದಲ್ಲಿ ೧೯೮೫ರಿಂದಲೂ ವೈದ್ಯಾಧಿಕಾರಿಗಳು ಇಲ್ಲ. ಆಲ್ಲಿ ಪ್ರತಿನಿತ್ಯ ಸಾವಿರಾರು ಜನ ಯಾತ್ರಾರ್ಥಿಗಳು ಶುಭ್ರಮ್ಮಣ್ಯಕ್ಕೆ ಬರುವಂತಹ ಸ್ಥಳ. ಕಳೆದ ಅಧಿವೇಶನದಲ್ಲೂ ಇದೇ ಪ್ರಶ್ನೆಯನ್ನು ನಾನು ಕೇಳಿದ್ದೆ. ಅದು ಆದ ಮೇಲ ಕಳೆದ ವರ್ಷ ೧೦೦ ವೈದ್ಯಾಧಿಕಾರಿಗಳನ್ನು ನೇಮಕ ಮಾಡಿಕೊಂಡಿದ್ದರೂ ನಮ್ಮ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ವೈದ್ಯಾಧಿಕಾರಿಗಳನ್ನು ನೇಮಿಸಿರುವುದಿಲ್ಲ. ಸೂಳ್ಯ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಕಟ್ಟಡ ಕೂಡ ಮಂಜೂರಾಗಿದೆ. ಕಟ್ಟಡವನ್ನು ಕಟ್ಟಲು ಟೆಂಡರ್‌ಗೆ ಕೊಟ್ಟಿದ್ದು ೫ ಲಕ್ಷ ರೂಪಾಯಿಗಳಿಗೆ. ಆ ಟೆಂಡರ್‌ದಾರರು, ಸುಮಾರು ೫ ಲಕ್ಷ ರೂಪಾಯಿಗಳ ಕೆಲಸಕಾರ್ಯಗಳನ್ನು ಪೂರ್ತಿಗೊಳಿಸಿದ್ದಾರೆ. ಆ ಟೆಂಡರ್‌ದಾರರಿಗೆ ಇನ್ನೂ ಒಂದು ಲಕ್ಷ ರೂ.ಗಳ ಹಣ ಕೊಡುವುದು ಬಾಕಿ ಉಳಿದಿದೆ. ಉಳಿದ ಹಣವನ್ನು ಕೊಟ್ಟರೆ ಆ ಕಂಟ್ರಾಕ್ಟ್‌ದಾರರು ಬಾಕಿ ಕೆಲಸವನ್ನು ೬ ತಿಂಗಳಲ್ಲಿ ಪೂರೈಸುತ್ತಾರೆ. ಮತ್ತೆ ಸೂಳ್ಯ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿದ್ದಂತಹ ಕೆಟ್ಟು ಹೋದ ಜೀಪನ್ನು ರಿಪೇರಿ ಮಾಡುವ ಬಗ್ಗೆ ಜಿಲ್ಲಾ ವೈದ್ಯಾಧಿಕಾರಿಗಳು ಇದುವರೆವಿಗೂ ತೀರ್ಮಾನವನ್ನು ಕೈಗೊಂಡಿರುವುದಿಲ್ಲ. ಈ ಬಗ್ಗೆ ಮಾನ್ಯ ಮಂತ್ರಿಗಳು ಏನು ಕ್ರಮ ತೆಗೆದುಕೊಳ್ಳುತ್ತಾರೆಂಬುದನ್ನು ತಿಳಿಸಬೇಕು.

ಶ್ರೀ ಎಚ್. ಟಿ. ಕೃಷ್ಣಪ್ಪ.—ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಕೇಳಿರುವಂತಹ ಪ್ರಶ್ನೆಗೆ ಎಷ್ಟು ವೈದ್ಯಾಧಿಕಾರಿಗಳ ಹುದ್ದೆಗಳು ಖಾಲಿ ಇವೆ ಎಂಬುದನ್ನು ತಿಳಿಸಿದ್ದೇನೆ. ಈ ಸಭೆಯು ಅಪಗಾಹನೆಗೆ ತರತಕ್ಕಂತಹ ಇನ್ನೊಂದು ಮುಖ್ಯವಾದ ಅಂಶವೇನೆಂದರೆ. ಲೋಕ ಸೇವಾ ಆಯೋಗದ ಪಂಒಲಕ ೧೯೦ ವೈದ್ಯಾಧಿಕಾರಿಗಳನ್ನು ನೇಮಂಕ ಮಾಡಿಕೊಂಡಿರುತ್ತೇವೆ. ಆ ವೈಕಿ ೧೫೦ ಜನ ಪುರುಷ ವೈದ್ಯಾಧಿಕಾರಿಗಳು. ಹಾಗೂ ೪೦ ಜನ ಪಂಹಿಳಾ ವೈದ್ಯಾಧಿಕಾರಿಗಳಂ. ಈ ೧೫೦ ಜನರ ವೈಕಿ ೨೪ ಜನರನ್ನು ದಕ್ಷಿಣ ಕನ್ನಡ ಜಿಲ್ಲೆಗೆ ಪೋಸ್ಟಿಂಗ್ಸ್ ಮಾಡಲಾಗಿದೆ. ಆದರೂ ಇನ್ನೂ ಕೆಲವು ವೈದ್ಯಾಧಿಕಾರಿಗಳ ಹುದ್ದೆಗಳು ಖಾಲಿ ಇವೆ ಎಂಬ ವಿಚಾರವನ್ನು ನಾನು ಈಗಾಗಲೇ ಸಭೆಯ ಗಮನಕ್ಕೆ ತಂದಿದ್ದೇನೆ. ನಾನು ಮಾನ್ಯ ಸದಸ್ಯರ ಗಮನಕ್ಕೆ ತರುವುದೇನೆಂದರೆ, ಕೆಲವು ವೈದ್ಯಾಧಿಕಾರಿಗಳು ಪೋಸ್ಟಿಂಗ್ಸ್ ಮಾಡಿದ ಸ್ಥಳಗಳಿಗೆ ಹೋಗುತ್ತಿಲ್ಲ. ಯಾರು ಅವರು ಹಾಕಿದ ಸ್ಥಳಗಳಿಗೆ ಹೋಗುವುದಿಲ್ಲವೋ ಅಂತಹವರ ಮೇಲೆ ನಿಯಮಗಳ ಪ್ರಕಾರ ಕ್ರಮ ಜರುಗಿಸಬೇಕೆಂಬ ತೀರ್ಮಾನಕ್ಕೆ ಬಂದಿದ್ದೇವೆ. ಇಷ್ಟಾದರೂ ವೈದ್ಯಕೀಯ ಸೌಲಭ್ಯಗಳನ್ನು ಒದಗಿಸಿ ಕೊಡತಕ್ಕಂತಹದ್ದರಲ್ಲಿ ದೊಡ್ಡ ಸಾಧನೆ ಮಾಡಿದ್ದೇವೆಂದು ಹೇಳುವುದಿಲ್ಲ. ಆಸ್ಪತ್ರೆಗಳು ಇದ್ದ ಕಡೆ ವೈದ್ಯಾಧಿಕಾರಿಗಳು ಬೇಕೇಬೇಕು. ಅವರ ಜೊತೆಗೆ ಬೇರೆ ಸಿಬ್ಬಂದಿ ಕೂಡ ಬೇಕಾಗುತ್ತದೆ ಇಷ್ಟಾದರೂ ಇನ್ನೂ ಸುಮಾರು ೨೦೦ ವೈದ್ಯಾಧಿಕಾರಿಗಳ ಹುದ್ದೆಗಳು ಖಾಲಿ ಇವೆ. ಆ ಕೊರತೆಯನ್ನು ನೀಗಿಸುವುದಕ್ಕೋಸ್ಕರ ಗಣತ್ತಿಗೆ ಆಧಾರದ ಮೇಲೆ ವೈದ್ಯಾಧಿಕಾರಿಗಳನ್ನು ನೇಮಂಕ ಮಾಡಿಕೊಳ್ಳುವುದಕ್ಕೆ ಸಿದ್ಧರಿದ್ದೇವೆ. ಯಾರಾದರು ಪದವೀಧರರು, ಎಂ.ಬಿ.ಬಿ.ಎಸ್.ನ್ನು ಪಾಸು ಮಾಡಿಕೊಂಡಿರುವವರು ಅರ್ಜಿಕೊಟ್ಟರೆ ತಾತ್ಕಾಲಿಕವಾಗಿ ಅವರನ್ನು ನೇಮಂಕ ಮಾಡಿಕೊಳ್ಳುವುದಕ್ಕೆ ವ್ಯವಸ್ಥೆ ಮಾಡುತ್ತೇನೆ.